ಕುಂದಾಪುರ ಪುರಸಭೆಯ ವ್ಯಾಪ್ತಿಯಲ್ಲಿರುವ ನೀರು ಶೇಖರಣಾ ಟ್ಯಾಂಕುಗಳು.

854(1240) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕುಂದಾಪುರ ಪುರಸಭೆಯ ವ್ಯಾಪ್ತಿಯಲ್ಲಿ ಇರುವ ಕುಡಿಯುವ ನೀರು ಶೇಖರಣಾ ಟ್ಯಾಂಕುಗಳ ಸಂಖ್ಯೆ ಎಷ್ಟು ಮತ್ತು ಅವು ಶೇಖರಿಸುವ ನೀರಿನ ಪ್ರಮಾಣವೆಷ್ಟು?

ಆ) ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ ಪ್ರತಿದಿನ ಉಪಯೋಗವಾಗುವ ಕುಡಿಯುವ ನೀರಿನ ಪ್ರಮಾಣವೆಷ್ಟು ;

ಇ) ಕುಂದಾಪುರ ಪುರಸಭೆಯ ವ್ಯಾಪ್ತಿಯಲ್ಲಿ ಅಗತ್ಯವಿರುವ ನೀರಿನ ಪ್ರಮಾಣವೆಷ್ಟು ಕೊರತೆ ಇದೆಯೇ ಹಾಗಿದ್ದಲ್ಲಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :—

ಅ) ಟ್ಯಾಂಕ್‌ಗಳ ಸಂಖ್ಯೆ - 4
ನೀರಿನ ಪ್ರಮಾಣ - 6 ಲಕ್ಷ ಲೀಟರ್‌ಗಳು.

ಆ) ಜುಲೈನಿಂದ ಡಿಸೆಂಬರ್‌ವರೆಗೆ ಪ್ರತಿದಿನ 6 ಲಕ್ಷ ಲೀಟರ್,
ಡಿಸೆಂಬರ್‌ನಿಂದ ಜೂನ್‌ವರೆಗೆ 2.5 ಲಕ್ಷಲೀಟರ್‌ನಿಂದ 3.5 ಲಕ್ಷ ಲೀಟರ್.

ಇ) ಕುಂದಾಪುರ ಪುರಸಭೆಯ ವ್ಯಾಪ್ತಿಯಲ್ಲಿ ಅಗತ್ಯವಿರುವ ನೀರಿನ ಪ್ರಮಾಣ 20.00 ಲಕ್ಷ ಲೀಟರ್‌ಗಳು.
ಪ್ರಸ್ತುತ ನೀರಿನ ಕೊರತೆ ಇದ್ದು, ಸರ್ಕಾರದ ಗಮನಕ್ಕೆ ಬಂದಿದೆ.

ಈ) ಈ ಬಗ್ಗೆ ಕುಂದಾಪುರ ಪುರಸಭೆಯವರು 1997-98ನೇ ಸಾಲಿಗೆ ಅಂದಾಜು ಮೆಚ್ಚ ರೂ.14.50 ಲಕ್ಷಗಳನ್ನು ಸಲ್ಲಿಸಿ, ತುರ್ತಾಗಿ ರೂ.5-00 ಲಕ್ಷಗಳನ್ನು ನೀರಿನ ಅಭಾವ ಪರಿಹಾರದಲ್ಲಿ ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಕೋರಿದ್ದಾರೆ.

ಪುತ್ತೂರು ನಗರದ ಎಡಿಬಿ ಯೋಜನೆ ಕಾರ್ಯಕ್ರಮ.

855(1264) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಪುತ್ತೂರು ನಗರದ ಎಡಿಬಿ ಯೋಜನೆ ಕಾರ್ಯಕ್ರಮಗಳು ಈಗ ಯಾವ ಹಂತದಲ್ಲಿದೆ?

2) ಪುತ್ತೂರು ನಗರಸಭೆಯ ಆಸ್ಪತ್ರೆಯಾವ ಹಂತದಲ್ಲಿದೆ?

3) ಈ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :-

1) ಈ ಯೋಜನೆಯಡಿ ತೆಗೆದುಕೊಳ್ಳಲಾಗುವ ಕಾಮಗಾರಿಗಳನ್ನು ಗುರುತಿಸಲಾಗಿರುತ್ತದೆ. ಈ ಬಗ್ಗೆ ಭಾರತ, ರಾಜ್ಯ ಸರ್ಕಾರ ಹಾಗೂ ಎ.ಡಿ.ಬಿ. ಯೊಡನೆ ಸಾಲದ ಒಡಂಬಡಿಕೆಯಾಗಿರುವುದಿಲ್ಲ. ಅಕ್ಟೋಬರ್ 1999ರಷ್ಟರಲ್ಲಿ ಸಾಲ ಒಡಂಬಡಿಕೆಯು ಸಹಿಯಾಗಿ ಯೋಜನೆ ಜಾರಿಗೆ ಬರುವ ಅಂದಾಜು ಮಾಡಲಾಗಿದೆ. ಆ ನಂತರ ಅನುಮೋದಿತ ಕಾರ್ಯಕ್ರಮದಂತೆ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

2) ಪುತ್ತೂರು ನಗರಸಭೆಯ ಆಸ್ಪತ್ರೆಯನ್ನು ಎ.ಡಿ.ಬಿ. ಯೋಜನೆಯಡಿ ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾವನೆಯಾಗಿರುವುದಿಲ್ಲ.

3) ಅಕ್ಟೋಬರ್ 1999 ರಷ್ಟರಲ್ಲಿ ಸಾಲ ಒಡಂಬಡಿಕೆಯು ಜಾರಿಗೆಯಾಗಬಹುದೆಂದು ಅಂದಾಜು ಮಾಡಲಾಗಿದೆ. ಆನಂತರವಷ್ಟೆ, ಅನುಮೋದಿತ ಕಾರ್ಯಕ್ರಮದಂತೆ ಕಾಮಗಾರಿಗಳನ್ನು ಪ್ರಾರಂಭಿಸಲು ಸಾಧ್ಯವಾಗುವುದು.

*ಮೈಸೂರು ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆ.*

856(1260) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರದ ವಿವಿಧ ಇಲಾಖೆಗಳ ಮುಖೇನ 1998-99ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ಖರ್ಚು ಮಾಡಿರುವ ಹಣವೆಷ್ಟು ;

ಆ) ಮೈಸೂರು ಜಿಲ್ಲೆಯಲ್ಲಿ ಈ ಯೋಜನೆಯಡಿ ಖರ್ಚಾದ ಹಣ ಎಷ್ಟು ;

ಇ) 1997-98ನೇ ಸಾಲಿನ ಎನ್.ಸಿ.ಪಿ.ಗೆ ಸಂಬಂಧಿಸಿದಂತೆ ಮೈಸೂರು ಜಿಲ್ಲೆಯಿಂದ ಬಾಕಿ ಇರುವ ಉಪಯುಕ್ತ ದೃಢೀಕರಣಗಳೆಷ್ಟು ;

ಈ) ಉಪಯುಕ್ತ ದೃಢೀಕರಣ ನೀಡದಿರುವ ಅಧಿಕಾರಿಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?